## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 22

# ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ಅಧಿನಿಯಮ, 2005

### ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು
2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2005–06 ನೇ ಹಣಕಾಸು ವರ್ಷಕ್ಕಾಗಿ 10331575000 ರೂಪಾಯಿಗಳ ನೀಡಿಕೆ
3. ಧನವಿನಿಯೋಗ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005–06 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 22)

## 2005 ರ ಕರ್ನಾಟಕ ಅಧಿನಿಯಮ ಸಂಖ್ಯೆ 22

(2005 ರ ಆಗಸ್ಟ್ ಇಪ್ಪತ್ತಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ಅಧಿನಿಯಮ, 2005

(2005 ರ ಆಗಸ್ಟ್ ಇಪ್ಪತ್ತೆರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

2005–06ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

**1. ಸಂಕ್ಷಿಪ್ತ ಹೆಸರು:–** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ಅಧಿನಿಯಮ 2005 ಎಂದು ಕರೆಯತಕ್ಕದ್ದು.

**2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ** 2005–06 **ನೇ ಹಣಕಾಸು ವರ್ಷಕ್ಕಾಗಿ 10331575000 ರೂಪಾಯಿಗಳ ನೀಡಿಕೆ:–** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2005–06 ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ***ಒಂದು ಸಾವಿರದ ಮುವತ್ತ್ಮೂರು ಕೋಟಿ ಹದಿನೈದು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳಿಗೆ*** ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು

**3. ಧನವಿನಿಯೋಗ :–** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 1615 ದಿನಾಂಕ: 23.8.2005 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 53 ಶಾಸನ 2005

**ಅನುಸೂಚಿ**

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಲಕ್ಷ ರೂ.ಗಳಲ್ಲಿ)

| ಬೇಡಿಕೆ ಸಂಖ್ಯೆ | **ಸೇವೆ ಮತ್ತು ಉದ್ದೇಶ** | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ವಿಧಾನಸಭೆಯಿಂದ ಪುರಸ್ಕೃತವಾದುದು | ಸಂಚಿತ ನಿಧಿಯಿಂದ ಪ್ರಭೃತವಾದುದು | |
| 1 | 2 | | 3 | 4 | 5 |
| 1 | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ | 2000.00 | --- | 2000.00 |
| 2 | ಪಶುಸಂಗೋಪನೆ ಮತ್ತು ಮೀನುಗಾರಿಕೆ | ರಾಜಸ್ವ<br>ಬಂಡವಾಳ | 1464.95<br>500.00 | --- | 1464.95<br>500.00 |
| 3 | ಆರ್ಥಿಕ | ರಾಜಸ್ವ<br>ಬಂಡವಾಳ | 4531.40<br>125.00 | --- | 4531.40<br>125.00 |
| 4 | ಸಿಬ್ಬಂದಿ ಮತ್ತು ಆಡಳಿತ ಸುದಾರಣೆ ಇಲಾಖೆ | ರಾಜಸ್ವ | 63.50 | 10.00 | 73.50 |
| 5 | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ | 1943.12 | -- | 1943.12 |
| 6 | ಮೂಲಭೂತ ಸೌಕರ್ಯ | ಬಂಡವಾಳ | 780.00 | --- | 780.00 |
| 7 | ಗ್ರಾಮೀಣ ಅಬಿವೃದ್ಧಿ ಮತ್ತು ಪಂಚಾಯತಿ ರಾಜ್ | ರಾಜಸ್ವ<br>ಬಂಡವಾಳ | 3933.77<br>2703.00 | --- | 3933.77<br>2703.00 |
| 8 | ಅರಣ್ಯ , ಜೀವಿ ಶಾಸ್ತ್ರ ಮತ್ತು ಪರಿಸರ | ರಾಜಸ್ವ | 4463.38 | --- | 4463.38 |
| 9 | ಸಹಕಾರ | ರಾಜಸ್ವ<br>ಬಂಡವಾಳ | 1300.00<br>533.82 | --- | 1300.00<br>533.82 |
| 10 | ಸಮಾಜ ಕಲ್ಯಾಣ | ರಾಜಸ್ವ<br>ಬಂಡವಾಳ | 1804.49<br>989.48 | --- | 1804.49<br>989.48 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ | ರಾಜಸ್ವ | 776.34 | 0.98 | 777.32 |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | ರಾಜಸ್ವ | 1061.11 | --- | 1061.11 |
| 13 | ಆಹಾರ ಮತ್ತು ನಾಗರೀಕ ಸರಬರಾಜು | ರಾಜಸ್ವ<br>ಬಂಡವಾಳ | 115.00<br>800.00 | --- | 115.00<br>800.00 |
| 14 | ಕಂದಾಯ | ರಾಜಸ್ವ | 9050.67 | --- | 9050.67 |
| 15 | ಮಾಹಿತಿ ತಂತ್ರಜ್ಞಾನ | ರಾಜಸ್ವ | 1281.00 | --- | 1281.00 |
| 16 | ವಸತಿ | ರಾಜಸ್ವ<br>ಬಂಡವಾಳ | 8778.01<br>8575.00 | --- | 8778.01<br>8575.00 |

(ಲಕ್ಷ ರೂ.ಗಳಲ್ಲಿ)

| 1 | 2 | | 3 | 4 | 5 |
|---|---|---|---|---|---|
| 17 | ಶಿಕ್ಷಣ | ರಾಜಸ್ವ<br>ಬಂಡವಾಳ | 3521.00<br>1753.00 | --- | 3521.00<br>1753.00 |
| 18 | ವಾಣಿಜ್ಯ ಮತ್ತು ಕೈಗಾರಿಕೆ | ರಾಜಸ್ವ | 3195.06 | --- | 3195.06 |
| | | ಬಂಡವಾಳ | 3287.54 | --- | 3287.54 |
| 19 | ನಗರಾಭಿವೃದ್ಧಿ | ರಾಜಸ್ವ<br>ಬಂಡವಾಳ | 4116.50<br>8575.00 | ---<br>--- | 4116.50<br>8575.00 |
| 20 | ಲೋಕೋಪಯೋಗಿ | ರಾಜಸ್ವ<br>ಬಂಡವಾಳ | 5507.53<br>2000.00 | ---<br>--- | 5507.53<br>2000.00 |
| 21 | ಜಲಸಂಪನ್ಮೂಲ | ರಾಜಸ್ವ | 10.00 | --- | 10.00 |
| | | ಬಂಡವಾಳ | 3050.00 | --- | 3050.00 |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ | 5470.00 | --- | 5470.00 |
| 23 | ಕಾರ್ಮಿಕ | ರಾಜಸ್ವ | 738.00 | --- | 738.00 |
| 24 | ಇಂಧನ | ರಾಜಸ್ವ | 1586.00 | --- | 1586.00 |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ<br>ಬಂಡವಾಳ | 244.00<br>50.00 | --- | 244.00<br>50.00 |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | 875.50 | --- | 875.50 |
| 27 | ಕಾನೂನು | ರಾಜಸ್ವ | 1712.60 | | 1712.60 |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | ರಾಜಸ್ವ | 40.00 | --- | 40.00 |
| | **ಜುಮ್ಲಾ** | **ರಾಜಸ್ವ** | **69582.93** | **10.98** | **69593.91** |
| | | **ಬಂಡವಾಳ** | **33721.84** | **0.00** | **33721.84** |
| | **ಒಟ್ಟು ಜುಮ್ಲಾ** | | **103304.77** | **10.98** | **103315.75** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.